<u>ಅಸಲ ದಾವೆ ನಂ. 912/2022</u>

ಮಾನ್ಯ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಗೋಕಾಕ ಇವರ ನ್ಯಾಯಾಲಯದಲ್ಲಿ ಗೋಕಾಕ.

ಇವರ ನಡುವೆ

1) ಶ್ರೀಮತಿ ಮಲ್ಲವ್ವ ಕೊಂ ಬಸಪ್ಪ @ ಬಸವರಾಜ ಕಿತ್ತೂರ ಮತ್ತು ಇತರರು

--ವಾದಿಯರು.

ವಿರುದ್ಧ

1) ಶ್ರೀ ಬಸಪ್ಪ @ ಬಸವರಾಜ ತಂದೆ ಬಾಲಪ್ಪ ಕಿತ್ತೂರ ಮತ್ತು ಇತರರು

---ಪ್ರತಿವಾದಿಯರು.

NOTARY
R.S. Beerannavar
Gokak Rev. Taluka
District:Belagavi
Regd. No.Law/
LCL-213/2025
Exp.16-11-2030
GOVT. OF KARNATAKA

<u>ಪಿ.ಡಬ್ಲೂ-1 ಇವರ ಮುಖ್ಯ ಸಾಕ್ಷಿ ವಿಚಾರಣೆ ಪ್ರಮಾಣ ಪತ್ರದ ಮೂಲಕ:</u>

ಇದರಲ್ಲಿ ನಾನು ಶ್ರೀಮತಿ ಮಲ್ಲವ್ವ ಕೊಂ ಬಸಪ್ಪ @ ಬಸವರಾಜ ಕಿತ್ತೂರ, ವಯಾ: 48 ವರ್ಷ, ಉದ್ಯೋಗ: ಮನೆಗೆಲಸ, ಸಾಕೀನ: ಪಟ್ಟಿಹಾಳ, ತಾ: ಬೈಲಹೊಂಗಲ, ಈ ಹೊತ್ತು ಮುಕ್ಕಾಂ ಗೋಕಾಕದಲ್ಲಿ ಸತ್ಯ ಪ್ರತಿಜ್ಞೆಯ ಮೇರೆಗೆ ಮಾಡುವ ಸಾಕ್ಷಿ ಪ್ರಮಾಣ ಪತ್ರ ಏನೆಂದರೆ:-

1) ನಾನು ಸದರಿ ದಾವೆಯಲ್ಲಿ ವಾದಿ ನಂ.1 ಇರುತ್ತೇನೆ. ಸದರಿ ಪ್ರಕರಣದ ಸಂಪೂರ್ಣ ಮಾಹಿತಿ ಇರುತ್ತದೆ. ಕಾರಣ ನಾನು ನನ್ನ ಮತ್ತು ವಾದಿ ನಂ.2 ಮತ್ತು 3 ಇವರ ಪರವಾಗಿ ಈ ಸಾಕ್ಷಿ ಪ್ರಮಾಣ ಪತ್ರವನ್ನು ಮಾಡುತ್ತಿರುತ್ತೇನೆ. ನನ್ನ ಹಾಗೂ ಇನ್ನೂಳಿದ ವಾದಿಯರ ಹಿತಾಶಕ್ತಿ ಒಂದೆ ಆಗಿರುತ್ತದೆ.

2) ದಾವಾ ಆಸ್ತಿಗಳು ಗೋಕಾಕ ತಾಲೂಕ ಪೈಕಿ ಗೋಕಾಕ ನಗರದಲ್ಲಿ ಜಮೀನಗಳು ಮತ್ತು ಮನೆ ವ ಖುಲ್ಲಾ ಜಾಗೆಗಳು ಇದ್ದು, 1) ರಿ.ಸ.ನಂ.1) 317/1 2) 318 3) 317/3 4) 317/5 ಹಾಗೂ

No. of CORRECTIONS

ಗೋಕಾಕ ನಗರದ ಮನೆಗಳು ಹಾಗೂ ಖುಲ್ಲಾ ಜಾಗೆಗಳು ದಾವಾ ಆಸ್ತಿಗಳು ಇದ್ದು ಸದರಿ ದಾವಾ ಆಸ್ತಿಗಳ ವಿವರವನ್ನು ವಾದ ಪತ್ರದ ಜೊತೆಗೆ ಲಗತ್ತಿಸಿದ ಅನುಬಂಧ "ಅ" ದಲ್ಲಿ ವಿವರಿಸಿದ್ದು ಇರುತ್ತದೆ. ಸದರಿ ಅನುಬಂಧ "ಅ" ವನ್ನು ವಾದ ಪತ್ರದ ಭಾಗವೆಂದು ಪರಿಗಣಿಸಲು ವಿನಂತಿ ಅದೆ.

3) ಅದರಂತೆ ನಮ್ಮ ಹಾಗೂ ಪ್ರತಿವಾದಿ ನಂ.1 ರಿಂದ 10 ರವರ ವಂಶಾವಳಿಯನ್ನು ವಾದಪತ್ರ ಅನುಬಂದ 'ಬ' ದಲ್ಲಿ ತಿಳಿಸಿದ್ದು ಸದರಿ ಅನುಬಂದ 'ಬ' ವನ್ನು ವಾದಪತ್ರದ ಭಾಗವೆಂದು ಪರಿಗಣಿಸಲು ವಿನಂತಿ ಇರುತ್ತದೆ. ನಮ್ಮ ಹಾಗೂ ಪ್ರತಿವಾದಿ ನಂ.1 ರಿಂದ 10 ರವರ ಮೂಲಪೂರುಷರಾದ ಶ್ರೀ ಅಡಿವೆಪ್ಪ ಕಿತ್ತೂರ ಅಂತಾ ಇದ್ದು, ಸದರಿ ಅಡಿವೆಪ್ಪ ಹಾಗೂ ಅವನ ಹೆಂಡತಿಯಾದ ದೊಡ್ಡವ್ವ ಬಹಳ ವರ್ಷಗಳ ಹಿಂದೆ ಮೈತವಾಗಿದ್ದು ಇರುತ್ತದೆ. ಮೈತ ಅಡಿವೆಪ್ಪ ಹಾಗೂ ದೊಡ್ಡವ್ವಳಿಗೆ 1) ಭೀಮಪ್ಪ 2) ಬಾಳಪ್ಪ ಅಂತಾ ಇಬ್ಬರು ಜನ ಗಂಡು ಮಕ್ಕಳು. ಇವರಲ್ಲಿ ಮೂಲ ಪುರುಷನ ಮೊಲದನೆ ಮಗನಾದ ಬೀಮಪ್ಪ ಅಂತಾ ಇದ್ದು, ಇತನಿಗೆ ಲಕ್ಷ್ಮವ್ವ ಅಂತಾ ಹೆಂಡತಿ ಇರುತ್ತಾಳೆ. ಸದರಿ ಭೀಮಪ್ಪ ದಿನಾಂಕ: 15/08/2000 ರಂದು ಮೈತವಾಗಿದ್ದು. ಮೈತರಿಗೆ ಲಕ್ಷ್ಮವ್ವ ಅಂತಾ ಹೆಂಡತಿ ಇದ್ದು, ಸದರಿ ಲಕ್ಷ್ಮವ್ವ ಮೈತವಾಗಿದ್ದು ಇರುತ್ತದೆ ಮೈತರಿಗೆ 1) ನಾಗವ್ವ (ಪ್ರವಾ7) 2) ಅಡಿವೆಪ್ಪ (ಪ್ರವಾ8) 3) ಮಾರುತಿ (ಪ್ರವಾ9) 4) ವಿಜಯಲಕ್ಷ್ಮಿ (ಪ್ರವಾ10) ಅಂತಾ ನಾಲ್ಕು ಜನ ಮಕ್ಕಳು ಇರುತ್ತಾನೆ. ಅದೇ ರೀತಿ ಮೂಲ ಪುರುಷ 2 ನೇ ಮಗನಾದ ಬಾಲಪ್ಪ ಇತನಿಗೆ ಗಂಗವ್ವ ಅಂತಾ ಹೆಂಡತಿ ಇದ್ದಳು ಸದರಿ ಬಾಲಪ್ಪ

ದಿನಾಂಕ: 05/01/1995 ರಂದು ಮೃತವಾಗಿದ್ದು ಇರುತ್ತದೆ. ಅದರಂತೆ ಅವನ ಹೆಂಡತಿಯಾದ ಗಂಗವ್ವ ಕೂಡಾ ಮೃತವಾಗಿದ್ದು ಇರುತ್ತದೆ. ಅದರಂತೆ ಅವನ ಹೆಂಡತಿಯಾದ ಗಂಗವ್ವ ಕೂಡಾ ಮೃತವಾಗಿದ್ದು ಇರುತ್ತದೆ. ಅದರಂತೆ ಅವನ ಹೆಂಡತಿಯಾದ ಗಂಗವ್ವ ಕೂಡಾ ಮೃತವಾಗಿದ್ದು ಇರುತ್ತದೆ. ಸದರಿ ಮೃತ ದಂಪತಿಳು ಬಸಪ್ಪ @ ಬಸವರಾಜ (ಪ್ರವಾನಂ.1) 2) ನಾಗವ್ವ (ಪ್ರವಾ2) 3) ಯಲ್ಲವ್ವ (ಪ್ರವಾ3) 4) ಅಡಿವೆಪ್ಪ (ಪ್ರವಾ4) 4) ಲಕ್ಷ್ಮೀ @ ಲಕ್ಷ್ಮವ್ವ (ಪ್ರವಾ5) 5) ಮಂಗಲಾ (ಪ್ರವಾ6) ಅಂತಾ ಮೂರು ಜನ ಹೆಣ್ಣು ಮಕ್ಕಳು ಹಾಗೂ ಇಬ್ಬರೂ ಗಂಡು ಮಕ್ಕಳು ಇರುತ್ತಾರೆ. ಅದೇ ರೀತಿ ಮೂಲ ಪುರುಷನ ಮೊದಲನೇ ಮಗನಾದ ಬಸಪ್ಪ @ ಬಸವರಾಜ ಇತನಿಗೆ ನಾನು (ವಾದಿ1) ಅಂತಾ ಹೆಂಡತಿ ಇರುತ್ತೇನೆ, ಸದರಿ ನನ್ನ ಮತ್ತು ಬಸಪ್ಪ @ ಬಸವರಾಜ ಇವರಿಗೆ ರವಿಚಂದರ ಅಂತಾ ಮಗನಿದ್ದು ಇತನು ದಿನಾಂಕ:26/03/2016 ರಂದು ಅವಿವಾಹಿತ ಪನದಲ್ಲಿ ಮೃತವಾಗಿದ್ದು ಇರುತ್ತದೆ ಮತ್ತು ಅದರಂತೆ ದೊಡ್ಡವ್ವ ಅಂತಾ ವಾದಿ ನಂ.2 ನನ್ನ ಮಗಳು. ವಿಠ್ಠಲ ಅಂತಾ ವಾದಿ ನಂ.3 ನನ್ನ ಮಗನು ನೇರವಾರಸುದಾರರು ಇರುತ್ತಾರೆ.

4) ಪ್ರತಿವಾದಿ ನಂ.11 ರಿಂದ 15 ಇವರು ಪ್ರತಿವಾದಿ ನಂ.1 ಇವನೊಂದಿಗೆ ಮಿಲಾಪಿಯಾಗಿ ದಾವಾ ಆಸ್ತಿಗಳ ಪೈಕಿ ಗೋಕಾಕ ಶಹರದ ಜಮೀನ ರಿ.ಸ.ನಂ.317/1 ಕ್ಷೇತ್ರ 08 ಎಕರೆ 37 ಗುಂಟೆ ಪೈಕಿ 19 ಗುಂಟೆ ಕ್ಷೇತ್ರವನ್ನು ಪ್ರತಿವಾದಿ ನಂ.11 ಆದ ಬಸವರಾಜ ಭೀಮಪ್ಪ ಇಳಿಗೇರ ಇವರ ಹೆಸರಿಗೆ, ಗೋಕಾಕ ಗ್ರಾಮದ ಜಮೀನ ರಿ.ಸ.ನಂ.318 ಕ್ಷೇತ್ರ 3 ಎಕರೆ 26 ಗುಂಟೆ ಪೈಕಿ 36 ಗುಂಟೆ 8 ಅಣೆ ಕ್ಷೇತ್ರವನ್ನು

NOTARY S. Beerannavar Tal. Rev. Taluka Dist: Belagavi No.Law/ /2025 2030 KARNATAKA

No. of CORRECTIONS

ಪ್ರತಿವಾದಿ ನಂ.12 ಆದ ಅನಸೂಯಾ ಬಸವರಾಜ ಇಳಿಗೇರ ಇವರ ಹೆಸರಿಗೆ, ಗೋಕಾಕ ಗ್ರಾಮದ ಜಮೀನ ರಿ.ಸ.ನಂ.316/3 ಕ್ಷೇತ್ರ 11 ಗುಂಟೆ ಕ್ಷೇತ್ರವನ್ನು ಪ್ರತಿವಾದಿ ನಂ.13 ಆದ ಪ್ರಕಾಶ ಸುಬ್ಬರಾವ ಬೊಕಲಕರ ಇವರ ಹೆಸರಿಗೆ ಸದರಿ ಜಮೀನುಗಳನ್ನು ಖೊಟ್ಟಿಯಾಗಿ ತಮ್ಮ ಹೆಸರಿಗೆ ಖರೀದಿ ನೋಂದಣಿ ಮಾಡಿಸಿಕೊಂಡವರು ಇರುತ್ತಾರೆ. ಮತ್ತು ಅದರಂತೆ ಗೋಕಾಕ ಗ್ರಾಮದ ಜಮೀನ ರಿ.ಸ.ನಂ.317/5 ಕ್ಷೇತ್ರ 14 ಗುಂಟೆ 08 ಅಣೆ ಇದನ್ನು ಮೊದಲಿಗೆ ಪ್ರತಿವಾದಿ ನಂ.15 ಆದ ಶ್ರೀಮತಿ ಶಾಂತವ್ವ ಕೋಂ ಹನಮಂತ ಸಿದ್ದಾಪೂರ ಇವರ ಹೆಸರಿಗೆ ನಂತರ ಸದರಿ ಪ್ರತಿವಾದಿ ನಂ.15 ಇವರು ಪ್ರತಿವಾದಿ ನಂ.14 ಆದ ಶ್ರೀಮತಿ ಮಾಹಾನಂದಾ ಕೋಂ ಗೌಡಪ್ಪ ಸಿದ್ದಾಪೂರ ಇವರ ಹೆಸರಿಗೆ ಖೋಟ್ಟಿಯಾಗಿ ಹಕ್ಕು ಬಿಟ್ಟ ಪತ್ರವನ್ನು ನೋಂದ ಮಾಡಿಕೊಂಡದ್ದು ಇರುತ್ತದೆ.

5) ನಾವು ಹಾಗೂ ಪ್ರತಿವಾದಿಯರು ಹಿಂದೂ ಮಿತಾಕ್ಷರ ಕಾಯ್ದೆಗೆ ಒಳಪಡುತ್ತಾರೆ. ಸದರ ದಾವಾ ಆಸ್ತಿಗಳು ನಮ್ಮ ಹಾಗೂ ಪ್ರತಿವಾದಿ ನಂ.1 ರಿಂದ 10 ಮನೆತನದ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳು ಇರುತ್ತವೆ. ಸದರಿ ದಾವಾ ಆಸ್ತಿಗಳು ಮೂಲ ಪುರುಷನಾದ ಅಡಿವೆಪ್ಪ ಇತನಿಂದ ವಾರಸಾ ಪ್ರಕಾರ ಬಂದ ಆಸ್ತಿಗಳು ಇರುತ್ತವೆ.

6) ನಾವು ಹಾಗೂ ಪ್ರತಿವಾದಿ ನಂ.1 ರಿಂದ 10 ಇವರ ಮನೆತನದ ಒಟ್ಟು ಕುಟುಂಬದ ಆಸ್ತಿಗಳಾದ ಸದರ ದಾವಾ ಆಸ್ತಿಗಳನ್ನು ನಮ್ಮ ಮತ್ತು ಪ್ರತಿವಾದಿ ನಂ.1 ರಿಂದ 6 ಶಾಖೆಯ ಮುಖ್ಯಸ್ಥನಾದ ಮೃತ ಭೀಮಪ್ಪ ಅಡಿವೆಪ್ಪ ಕಿತ್ತೂರ ಇವರು ತಮ್ಮ ಕುಟುಂಬದ ವ್ಯವಸ್ಥಾಪನೇಯ ಸಲುವಾಗಿ ಸದರ ಆಸ್ತಿಗಳಲ್ಲಿ ಹೆಸರುಗಳ

NO. OF CORRECTIONS

ಬದಲಾವಣೆಗಳನ್ನು ಮಾಡುತ್ತಾ ಬಂದಿದ್ದು ಇರುತ್ತದೆ. ಆದರೆ ಸದರ ಆಸ್ತಿಗಳ ಕುರಿತು ಯಾವುದೇ ರೀತಿಯ ಕಾನೂನು ಬದ್ದ ಸರಸ ನಿರಸ ಪ್ರತ್ಯೆಕ ವಾಟ್ನಿ ಮಾಡಿಕೊಂಡಿದ್ದು ಇರುವುದಿಲ್ಲ.

7) ನಾನು ಮತ್ತು ಪ್ರತಿವಾದಿ ನಂ.1 ಆದ ಶ್ರೀ ಬಸಪ್ಪ @ ಬಸವರಾಜ ತಂದೆ ಬಾಲಪ್ಪ ಕಿತ್ತೂರ ಇಬ್ಬರು ಗಂಡ ಹೆಂಡತಿ ಇದ್ದು, ಸದರಿ ಬಸಪ್ಪ ಇವರು ನನ್ನ ಮತ್ತು ಪ್ರತಿವಾದಿ ನಂ.1 ಇವರ ಮಕ್ಕಳಾದ ವಾದಿ ನಂ.2 ಮತ್ತು 3 ಇವರನ್ನು ವಿನಾಕಾರಣ ತಂಟೆ ತಕರಾರು ಮಾಡಿ ಮನೆಯಿಂದ ಹೊರಗೆ ಹಾಕಿದ್ದರಿಂದ ಸದರಿಯವರು ನನ್ನ ತವರು ಮನೆಯಾದ ಬೈಲಹೊಂಗಲ ತಾಲೂಕ ಪೈಕಿ ಪಟ್ಟಿಹಾಳ.ಕೆ.ಬಿ. ಗ್ರಾಮದಲ್ಲಿ ನೆಲೆಸಿದ್ದು ಇರುತ್ತದೆ.

8) ಪ್ರತಿವಾದಿ ನಂ.1 ಬಸಪ್ಪ ಇತನು ನನ್ನನ್ನು ನಮ್ಮ ಮನೆಯಿಂದ ಹೊರಗೆ ಇಟ್ಟು ಬೇರೊಬ್ಬ ಪರ ಸ್ತ್ರಿಯೊಂದಿಗೆ ಕಾನೂನು ವಿರುದ್ದ ಸಂಬಂದವನ್ನು ಹೊಂದಿ ಸದರಿ ನನ್ನನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿ ಮತ್ತು ನಮಗೆ ಸದರಿ ದಾವಾ ಆಸ್ತಿಗಳಲ್ಲಿಯ ಹಿಸ್ಸೆ ವ ಹಕ್ಕನ್ನು ನಷ್ಟಗೊಳಿಸುವ ದುರುದ್ದೇಶದಿಂದ ಬೇಕಾಯ್ದೆಶೀರ ರೀತಿಯಿಂದ ದಾವಾ ಆಸ್ತಿಗಳ ಪೈಕಿ 117/1 ಕ್ಷೇತ್ರ 09 ಎಕರೆ 04 ಗುಂಟೆ ಪೋಟ ಖರಾ 07 ಉಳಿದ್ದದ್ದು 08 ಎಕರೆ 37 ಗುಂಟೆ ಪೈಕಿ 19 ಗುಂಟೆ ಜಮೀನನ್ನು ಪ್ರತಿವಾದಿ ನಂ.11 ಆದ ಬಸವರಾಜ ಭೀಮಪ್ಪ ಇಳಿಗೇರ ಇವರ ಹೆಸರಿಗೆ, ಜಮೀನ ರಿ.ಸ.ನಂ.317/3 ನೇದ್ದರ ಕ್ಷೆತ್ರ 11 ಗುಂಟೆ ಜಮೀನನ್ನು ಪ್ರತಿವಾದಿ ನಂ.13 ಆದ ಪ್ರಕಾಶ ಸುಬರಾವ ಬೊಗಲಕರ ಇವರಿಗೆ, ಜಮೀನ ರಿ.ಸ.ನಂ.318 ಕ್ಷೇತ್ರ 03 ಎಕರೆ 26 ಗುಂಟೆ ಪೈಕಿ 36ಗುಂಟೆ ಕ್ಷೇತ್ರದ ಜಮೀನನ್ನು ಪ್ರತಿವಾದಿ ನಂ.12 ಆದ ಅನುಸೂಯಾ

No. of CORRECTIONS

ಬಸವರಾಜ ಇಳಿಗೇರ 36 ಗುಂಟೆ 08 ಅಣೆ ಮತ್ತು ಪ್ರತಿವಾದಿ ನಂ.14 ಆದ ಮಹಾನಂದ ಕೋಂ ಗೌಡಪ್ಪ ಸಿದ್ದಾಪೂರ ಇವರಿಗೆ ರಿ.ಸ.ನಂ.317/5 ಕ್ಷೇತ್ರ 14 ಗುಂಟೆ ಜಮೀನುಗಳನ್ನು ಹೀಗೆ ಹಂತ ಹಂತವಾಗಿ ಬೇ ಕಾಯ್ದೇಶೀದ ರೀತಿಯಿಂದ ಖೊಟ್ಟಿ ಖರೀದಿ ಮಾಡಿರುತ್ತಾರೆ. ಆದ್ದರಿಂದ ಸದರಿ ಖರೀದಿ ವ್ಯವಹಾರಗಳು ನಮಗೆ ಬಂಧನಕಾರಕವಾಗುವದಿಲ್ಲ.

9) ಹೀಗೆ ಮೇಲೆ ತಿಳಿಸಿದ ಪ್ರತಿವಾದಿ ನಂ.11 ರಿಂದ 15 ಇವರ ಹಸರಿಗೆ ಆದ ಖೊಟ್ಟಿ ಖರೀದಿ ಹಾಗೂ ಖೊಟ್ಟಿ ಹಕ್ಕು ಬದಲಾವಣೆಗಳ ವ್ಯವಹಾರದ ಬಗ್ಗೆ ನಮಗೆ ಜೂನ ತಿಂಗಳಲ್ಲಿ ಮೊದಲ ಬಾರಿಗೆ ಗೊತ್ತಾಗಿದ್ದರಿಂದ ನಾವು ನಮ್ಮ ವಕೀಲರ ಮುಖಾಂತರ ಪ್ರತಿವಾದಿ ನಂ.1, 4, 8 ರಿಂದ 10 ಹಾಗೂ 11 ರಿಂದ 15 ಇವರಿಗೆ ದಿನಾಂಕ: 05/07/2022 ರಂದು ನೋಂದಾಯಿತ ಅಂಚೆ ಮೂಲಕ ಕಾನೂನು ನೋಟಿಸನ್ನು ಕೊಟ್ಟದ್ದು ಇರುತ್ತದೆ. ಸದರಿ ನೋಟಿಸುಗಳ ಪೈಕಿ ಪ್ರತಿವಾದಿ ನಂ.9 ಹಾಗೂ 11 ರಿಂದ 15 ಇವರು ಜಾರಿಯಾಗಿದ್ದು ಇರುತ್ತದೆ. ಮತ್ತು ಅದಕ್ಕೆ ಪ್ರತಿವಾದಿ ನಂ.11 ರಿಂದ 15 ಇವರು ತಮ್ಮ ವಕೀಲರಿಗೆ ಖೋಟ್ಟಿ ಹಾಗೂ ಸುಳ್ಳು ಮಾಹಿತಿಗಳನ್ನು ಒದಗಿಸಿದ ದಿನಾಂಕ: 20/07/2022 ರಂದು ಒಂದು ಸುಳ್ಳು ಸಂಗತಿಗಳಿಂದ ಕೂಡಿದ ಉತ್ತರವನ್ನು ಅಂಚೆ ಮೂಲಕ ಕಳಿಸಿದ್ದು ಇರುತ್ತದೆ.

10) ದಾವಾ ಆಸ್ತಿಗಳಲ್ಲಿ ನಮ್ಮ ಹಾಗೂ ಪ್ರತಿವಾದಿಯರ ನಡುವೆ ಇಲ್ಲಿವರೆಗೂ ಸರಸ ನಿರಸ ವಾಟ್ನಿ ಆಗದೇ ಇವರುವರಿಂದ ಮತ್ತು ಸದರ ದಾವಾ ಆಸ್ತಿಗಳನ್ನು ಪ್ರತಿವಾದಿಯರು ನಮಗೆ ಗೊತ್ತಾಗದ ರೀತಿಯಲ್ಲಿ ಮೋಸತನದಿಂದ ಬೇರೆ ವ್ಯಕ್ತಿಗಳಿಗೆ ಬೇಕಾಯ್ದೇಶಿ ರೀತಿಯಿಂದ ಮಾರಾಟ ಮಾಡುವ ತಜವಿಜಿಯಲ್ಲಿ ಇರುತ್ತಾರೆ. ಈ ಸಂಬಂಧವಾಗಿ ನಾವು ಸದರ

ಪ್ರತಿವಾದಿ ಇವರನ್ನು ಕೇಳಿದ್ದು ಅದಕ್ಕೆ ಅವರು ಇಲ್ಲ ಸಲ್ಲದ ಕಾರಣಗಳನ್ನು ಹೇಳುತ್ತಾ ದಿನ ಮುಂದೂಡುತ್ತಾ ಬಂದಿರುತ್ತಾರೆ. ಇದರಿಂದ ನಮಗೆ ನಮ್ಮ ಪಾಲಿನ ಹಿಸ್ಸೆಯನ್ನು ಕೂಡುವಂತೆ ಪ್ರತಿವಾದಿಯರನ್ನು ಕೇಳಿದ್ದು ಅದಕ್ಕೆ ಸದರ ಪ್ರತಿವಾದಿಯರು ಇನ್ಕಾರ ಮಾಡಿದ್ದರಿಂದ ತಮ್ಮ ಹಿಸ್ಸೆದ ರಕ್ಷಣೆಗೊಸ್ಕರ ನಾವು ಸದರಿ ದಾವೆಯನ್ನು ಮಾಡಿಕೊಂಡಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ಪ್ರತಿವಾದಿಯರು ತಮ್ಮ ತಮ್ಮ ವಕೀಲರ ಮುಖಾಂತರ ಲಿಖಿತ ಹೇಳಿಕೆ ಸಲ್ಲಿಸಿದ್ದು, ಸದರಿ ಪ್ರತಿವಾದಿಗಳ ಹೇಳಿಕೆಗಳನ್ನು ತಳ್ಳಿಹಾಕಿ ನಮ್ಮ ಬೇಡಿಕೆಯ ಪ್ರರ್ಥನೆಗಳ ಪ್ರಕಾರ ಮಾನ್ಯ ನ್ಯಾಯಾಲಯವು ನಮ್ಮ ಪರ ಡಿಕ್ರಿ ಹುಕುಂ ಮಾಡಲು ನಮ್ಮ ವಿನಂತಿ ಪ್ರಾರ್ಥನೆ ಇರುತ್ತದೆ ಅಂತಾ ಮಾಡಿಕೊಂಡ ಸಾಕ್ಷಿ ಪ್ರತಿಜ್ಞಾಲೇಖನ.

ಸದರ ಪ್ರಕರಣದಲ್ಲಿ ಅವಶ್ಯಕ ಕಾಗದ ಪತ್ರಗಳನ್ನು ಹಾಜರ ಪಡಿಸಿದ್ದು ಅವುಗಳನ್ನು ನಿಶಾನೆಗೊಳಿಸಲು ವಿನಂತಿ ಪ್ರಾರ್ಥನೆ ಇದೆ.

ಈ ಮೇಲೆ ಸಾಕ್ಷಿ ಅಪ್ಪಿಡೆವಿಟದಲ್ಲಿ ಬರೆದ ಎಲ್ಲ ಮಜಕೂರು ನನ್ನ ಸ್ವಂತ ಮಾಹಿತಿ ವ ತಿಳಿವಳಿಕೆಯ ಪ್ರಕಾರ ಸರಿ ಹಾಗೂ ಸತ್ಯವಾದವು ಇರುತ್ತವೆ ಅಂತಾ ಮಾಡಿಕೊಂಡ ಸಾಕ್ಷಿ ಪ್ರತಿಜ್ಞಾಲೇಖನ.

ಶಪತವಿಧಿಗಾರ

ಗೋಕಾಕ
ದಿನಾಂಕ: 12/08/2026

"ಸದರಿಯವರ ಪರಿಚಯ ವಿದೆ"

(ಬಿ.ಕೆ.ಕಳಸನ್ನವರ)
ವಕೀಲರು ಗೋಕಾಕ

NOTARY * GOVT. OF KARNATAKA R.S. Beerannavar Gokak Rev. Taluka Dist. Belagavi Regd. No. Law/ LCL-213/2025 Exp. 16-11-2030

Sworn to before me
R. S. BEERANNAVAR
B.Com., LL.B. (Spl.)
ADVOCATE & NOTARY, GOKAK
12 AUG 2026